

بسم اللہِ الرّحمٰنِ الرّحیم

# "ನಾನು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು" ಎಂಬ ಪ್ರತಿಜ್ಞೆಯನ್ನು ತನ್ನ ಕೆಲಸಗಳ ಮೂಲಕ ಪ್ರಕಟಿಸಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **17-10-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* **ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:**

ಅಹ್ಮದಿಯಾ ಜಮಾಅತಿನ ಪ್ರತಿಯೊಬ್ಬ ಪುರುಷ, ಮಹಿಳೆ, ದೊಡ್ಡವರು, ಚಿಕ್ಕವರು ಒಂದು ವಾಕ್ಯವನ್ನು ತಿಳಿದುಕೊಂಡಿರುತ್ತಾರೆ. "ನಾನು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು" ಎನ್ನುವುದೇ ಆ ವಾಕ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್[ಅ]ರು ಈ ಪ್ರತಿಜ್ಞೆ ಬಗ್ಗೆ ಬಹಳ ಗಮನ ಸೆಳೆದಿದ್ದಾರೆ. ನಮ್ಮ ಜಮಾಅತಿನ ಭಾಷಣಗಾರರು, ಲೇಖನ ಬರೆಯುವವರು, ನಮ್ಮ ಜಮಾಅತಿನ ಖಲೀಫರು ಈ ವಾಕ್ಯವನ್ನು ಆಗಾಗ ಬಳಸುತ್ತಿರುತ್ತಾರೆ. ಬೈಅತ್ ಶರ್ತಗಳ ಸಾರಾಂಶ ಸಹ ಇದೇ ಆಗಿದೆ. ನಮ್ಮ ಜಮಾಅತಿನ ಅಧೀನ ಸಂಘಟನೆಗಳ ಪ್ರತಿಜ್ಞೆಗಳ ಸಾರಾಂಶ ಸಹ ಇದೇ ಆಗಿರುತ್ತದೆ. ಅದೂ ಅಲ್ಲದೆ ಬೈಅತ್ ಮಾಡುವ ಸಂದರ್ಭದಲ್ಲಿಯೂ ಈ ಪ್ರತಿಜ್ಞೆಯನ್ನು ಮಾಡಿಸಲಾಗುತ್ತಿದೆ. ಒಟ್ಟಿನಲ್ಲಿ ಈ ವಾಕ್ಯ ಬೈಅತ್ ಪ್ರತಿಜ್ಞೆ ಸ್ವೀಕರಿಸಿದ ಪ್ರತಿಯೊಬ್ಬ ಅಹ್ಮದಿಯ ಪ್ರತಿಜ್ಞೆಯಾಗಿದೆ. ಖಿಲಾಫತ್ ಮತ್ತು ಜಮಾಅತ್ ವ್ಯವಸ್ಥೆಯೊಂದಿಗೆ ಇದು ಜೋಡಿಸಲ್ಪಡಬೇಕೆಂದು ಉದ್ದೇಶಿಸಲಾಗಿದೆ. ಇಲ್ಲವಾದರೆ ಬೈಅತ್ ಮಾಡಿರುವೆನೆಂಬ ವಾದವೇ ತಪ್ಪಾಗುತ್ತದೆ. ಈ ಪ್ರತಿಜ್ಞೆ ಪಾಲಿಸದಿದ್ದರೆ ಜಮಾಅತ್‌ನೊಂದಿಗೆ ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಹೊಂದಿರುವುದಾಗಿ ಹೇಳುವ ವಾದವು ತಪ್ಪಾಗಿರುತ್ತದೆ. ಹಾಗೆ, ಬೈಅತ್ ಮಾಡಿರುವುದಾಗಿ ಹೇಳುವುದು ಮತ್ತು ಅಲ್ಲಾಹನ ಸಂಪ್ರೀತಿ ಗಳಿಸುವ ಮಾತುಗಳು ಎಲ್ಲವೂ ಕೇವಲ ಬಾಯಿ ಮಾತುಗಳು ಮಾತ್ರವಾಗಿ ಬಿಡುತ್ತವೆ. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್[ಅ] ಒಂದು ಕಡೆ ಹೀಗೆ ಹೇಳಿದ್ದಾರೆ:

"ಒಬ್ಬನು ಬೈಅತ್ ಮಾಡುವಾಗ 'ನಾನು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು' ಎಂದು ಹೇಳಿ ಅದನ್ನು ಸತ್ಯವಾಗಿ ತನ್ನ ಕೆಲಸಗಳ ಮೂಲಕ ಪ್ರಕಟಿಸದಿದ್ದರೆ ಮತ್ತು ಪ್ರತಿಜ್ಞೆಗೆ ನಿಷ್ಠನಾಗಿರುವುದನ್ನು ಕಾರ್ಯರೂಪದಲ್ಲಿ ತೋರಿಸದಿದ್ದರೆ ಅಂತಹ ವ್ಯಕ್ತಿಯ ಬಗ್ಗೆ ಅಲ್ಲಾಹನು ಹೇಗೆ ತಾನೆ ಗಮನಿಸುವನು."

ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ಈ ಪ್ರತಿಜ್ಞೆಯನ್ನು ಯಾವಾಗಲೂ ತನ್ನ ಮುಂದೆ ಇರಿಸುವ ಆವಶ್ಯಕತೆ ಇದೆ. ಈ ಪ್ರತಿಜ್ಞೆಯ ಶಬ್ದಗಳು ಸೂಚಿಸುವ ಪ್ರಕಾರ ಧಾರ್ಮಿಕ ಕಾರ್ಯಗಳಿಗೆ ಯಾವುದೇ ಲೌಕಿಕ ಕಾರ್ಯ ಅಡ್ಡಿಯಾಗಬಾರದು. ಧಾರ್ಮಿಕ ಕಾರ್ಯ ಎಂದರೇನು? ಅಲ್ಲಾಹನ ಆಜ್ಞೆಗಳಿಗೆ ವಿಧೇಯನಾಗಿ ಜೀವಿಸುವುದೇ "ದೀನ್" ಅಥವಾ ಧರ್ಮವಾಗಿದೆ. ತನ್ನ ಪ್ರತಿಯೊಂದು ಮಾತು ಮತ್ತು ಕೃತಿಗಳನ್ನು ಅಲ್ಲಾಹನ ಸಂತೃಪ್ತಿಗೆ ವಿಧೇಯಗೊಳಿಸುವುದಾಗಿದೆ. ಅದರಲ್ಲಿ ಯಾವುದೇ ಅಡ್ಡಿ ಆತಂಕಗಳು ಬರದಂತೆ ನೋಡಿಕೊಳ್ಳಬೇಕಾಗಿದೆ. ಲೌಕಿಕ ವ್ಯವಹಾರಗಳಲ್ಲಿ ಸಹ ಪ್ರತಿಯೊಬ್ಬ ಮನುಷ್ಯನ ಕಾರ್ಯಕ್ಷೇತ್ರ ವಿಭಿನ್ನವಾಗಿರುತ್ತದೆ ಎಂದು ನಾವು ಕಾಣುತ್ತೇವೆ. ಕೆಲವರ ಪ್ರಯತ್ನ ಸೀಮಿತ ವಲಯದಲ್ಲಿ ಇರುತ್ತದೆ. ಏಕೆಂದರೆ ಅವರ ವಿಧ್ಯೆ ಮತ್ತು ಸಾಮರ್ಥ್ಯ ಸೀಮಿತವಾಗಿರುತ್ತದೆ. ಅಂಥವರಿಗೆ ತಮ್ಮ ಕಾರ್ಯಕ್ಷೇತ್ರ ವರ್ಧಿಸಲು ಅಡ್ಡಿ ಆತಂಕಗಳಿರುತ್ತವೆ. ಬೇರೆ ಕೆಲವರು ವಿಶಾಲವಾದ ಕಾರ್ಯಕ್ಷೇತ್ರ ಹೊಂದಿರುತ್ತಾರೆ. ಅವರು ಸರಿಯಾಗಿ ಕೆಲಸ ಸಹ ಮಾಡುತ್ತಾರೆ. ಒಂದು ಗುರಿ ಅವರಿಗಿರುತ್ತದೆ. ಅವರು ಅದನ್ನು ತಲಪಲು ಪೂರ್ಣ ಪ್ರಯತ್ನ ಮಾಡುತ್ತಾರೆ ಮತ್ತು ಅದನ್ನು ಗಳಿಸುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್[ರ] ಈ ವಿಷಯಕ್ಕೆ ಸಂಬಂಧಿಸಿ ಬರೆದಿದ್ದಾರೆ. ಸೀಮಿತ ವಲಯದ ಪ್ರಯತ್ನ ಮತ್ತು ಉದ್ದೇಶ ಲಕ್ಷ್ಯದ ಗಳಿಕೆಗೋಸ್ಕರ ಪ್ರಯತ್ನ ಇವುಗಳ ಬಗ್ಗೆ ಒಂದು ಸಾಮಾನ್ಯ ಉದಾಹರಣೆಯನ್ನು ಅವರು ಹೀಗೆ ವಿವರಿಸಿದ್ದಾರೆ: ಕೆಲವು ಜನರು ಯಾವಾಗಲೂ ತಮ್ಮ ಪೋಷಾಕಿನ ಬಗ್ಗೆ ಬಹಳ ಶ್ರದ್ಧೆ ವಹಿಸುತ್ತಾರೆ. ಏಶಿಯಾದ ಪುರುಷರು ಮತ್ತು ಮಹಿಳೆಯರು ತಮ್ಮ ಬಟ್ಟೆಗಳ ಬಗ್ಗೆ ಮತ್ತು ಫ್ಯಾಶನ್ ಬಗ್ಗೆ ಬಹಳ ಗಮನ ನೀಡುವವರಾಗಿದ್ದಾರೆ. ಆದರೆ ಕೆಲವರು ಹೇಗಿರುತ್ತಾರೆಂದರೆ ಅವರು ತಮ್ಮ ಪೋಷಾಕಿನ ಬಗ್ಗೆ ಕಾಳಜಿ ವಹಿಸುವವರಾಗಿದ್ದರೂ ತಮ್ಮ ಯಾವುದಾದರೂ ಉದ್ದೇಶವನ್ನು ಈಡೇರಿಸಬೇಕಾದುದು ಅಗತ್ಯವೆಂದು ಕಂಡಾಗ ಅವರು ತಮ್ಮ ಪೋಷಾಕನ್ನು ಬಲಿಯರ್ಪಿಸಲು ಸಿದ್ಧರಾಗುತ್ತಾರೆ. ಅವರು ಅಂದವಾಗಿ ಡ್ರೆಸ್ ಮಾಡಿರುವಾಗ ಯಾವುದಾದರೂ ಆವಶ್ಯಕತೆಗೆ ಓಡಬೇಕಾಗಿ ಬಂದರೆ ಓಡಲು ಸಿದ್ಧರಾಗುತ್ತಾರೆ. ಎಲ್ಲಿಯಾದರೂ ಕುಳಿತಿರಬೇಕಾದರೆ ಕುಳಿತುಕೊಳ್ಳುತ್ತಾರೆ. ಧೂಳು ಮುಸುಕಿದ ಸ್ಥಳದಲ್ಲಿ ನಡೆದು ಹೋಗಬೇಕಾದರೆ ನಡೆದು ಹೋಗುತ್ತಾರೆ. ಏಕೆಂದರೆ ಅವರು ಬಯಸುವುದು ತಮ್ಮ ಉದ್ದೇಶ ಲಕ್ಷ್ಯ ಈಡೇರಬೇಕು ಎಂದಾಗಿದೆ. ಇದಕ್ಕೆ ಒಂದು ಉದಾಹರಣೆ ಇಂಗ್ಲೆಂಡಿನ ಚರಿತ್ರೆಯಿಂದ ಸಿಗುತ್ತದೆ. ಪ್ರಥಮ ಎಲಿಝಬೆತ್ ಮಹಾರಾಣಿ 1558ರಲ್ಲಿ ಕಿರೀಟ ಧಾರಣೆ ಹೊಂದಿ 45 ವರ್ಷಕಾಲ ಆಡಳಿತ ನಡೆಸಿದ್ದಳು. ಇಂಗ್ಲೆಂಡ್ ಆಕೆಯ

ಕಾಲದಲ್ಲಿ ಬಹಳ ಶಕ್ತಿಶಾಲಿಯಾಗಿತ್ತು. ತನ್ನ ದರಬಾರಿನ ಸಭಾಸದರು ಉತ್ತಮ ಪೋಷಾಕು ಧರಿಸಿದವರಾಗ ಬೇಕೆಂದು ಆಕೆ ಬಯಸಿದ್ದಳು. ಬೆಲೆಬಾಳುವ ಪೋಷಾಕು ಧರಿಸದೆ ಆಕೆಯ ದರಬಾರಿಗೆ ಬರಲು ಸಾಧ್ಯವಿರಲಿಲ್ಲ. ಒಮ್ಮೆ ಆಕೆ ತನ್ನ ಸಮೀಪವರ್ತಿಗಳೊಂದಿಗೆ ಎಲ್ಲಿಗೋ ನಡೆದು ಹೋಗುತ್ತಿದ್ದರು. ಮಾರ್ಗ ಮಧ್ಯದಲ್ಲಿ ಒಂದು ಸ್ಥಳದಲ್ಲಿ ಸ್ವಲ್ಪ ಕೆಸರು ಕಂಡು ಬಂತು. ಆ ಸಂದರ್ಭದಲ್ಲಿ ಮಹಾರಾಣಿಯ ಜೊತೆ ನೌಕಾದಳದ ಸೇನಾಧಿಪತಿ ಸರ್ ವಾಲ್‌ಟರ್ ರ‍್ಯಾಲೇ ಇದ್ದನು. ಅವರು ಅತ್ಯುತ್ತಮ ಪೋಷಾಕ ಧರಿಸಿದ್ದರು. ಮಾರ್ಗ ಮಧ್ಯದಲ್ಲಿ ಕೆಸರನ್ನು ಕಂಡಕೂಡಲೆ ಅವರು ತನ್ನ ಬೆಲೆಬಾಳುವ ಕೋಟನ್ನು ಕಳಚಿ ಆ ಕೆಸರಿನ ಮೇಲೆ ಹಾಸಿದರು. ಕೆಸರು ಇರುವ ಸ್ಥಳ ಬಹಳ ಸ್ವಲ್ಪವಾಗಿದ್ದರಿಂದ ಆ ಕೋಟಿನಿಂದ ಕೆಸರನ್ನು ಮುಚ್ಚಲು ಸಾಧ್ಯವಾಯಿತು. ಅವರ ವರ್ತನೆಯನ್ನು ನೋಡಿ ಮಹಾರಾಣಿ ಆಶ್ಚರ್ಯಗೊಂಡು ವಿಚಾರಿಸಿದಾಗ ಸರ್ ವಾಲ್‌ಟರ್ ರ‍್ಯಾಲೇ ಹೇಳಿದರು: "ಮಹಾರಾಣಿಯ ಪಾದರಕ್ಷೆ ಮತ್ತು ಕಾಲು ಕೊಳೆಯಾಗುವುದಕ್ಕಿಂತ ರ‍್ಯಾಲೆಯ ಕೋಟು ಕೊಳೆಯಾಗುವುದೇ ಲೇಸು."

ಈ ಉದಾಹರಣೆಯಿಂದ ಸಿಗುವ ಪಾಠವೇನೆಂದರೆ ರ‍್ಯಾಲೇ ಬಹಳ ಉತ್ತಮವಾಗಿ ಪೋಷಾಕು ಧರಿಸುವವನಾಗಿದ್ದರೂ ಮಹಾರಾಣಿಯ ಪ್ರೀತಿಗೋಸ್ಕರ ತನ್ನ ಪೋಷಾಕನ್ನು ಬಿಟ್ಟುಬಿಡಲು ಅವರು ಸಿದ್ಧರಾದರು. ಅದನ್ನು ಬಲಿದಾನವಾಗಿ ನೀಡಿದರು. ಹೀಗಿರುವಾಗ ಧರ್ಮದ ಪ್ರಗತಿಗೋಸ್ಕರ, ಇಸ್ಲಾಮಿನ ಪ್ರಚಾರಕ್ಕೋಸ್ಕರ ಧರ್ಮವನ್ನು ಬಲಪಡಿಸಲಿಕ್ಕೋಸ್ಕರ ಮತ್ತು ನಮ್ಮ ಸೃಷ್ಟಿಕರ್ತನಾದ ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕೋಸ್ಕರ ನಾವು ಏನೆಲ್ಲಾ ಮಾಡಬೇಕೆಂದು ನಾವು ಯೋಚಿಸಬೇಕಾಗಿದೆ.

ಸರ್ ವಾಲ್‌ಟರ್ ರ‍್ಯಾಲೇಗೆ ಮಹಾರಾಣಿಯ ಪ್ರೀತಿಯನ್ನು ಗಳಿಸುವ ಉದ್ದೇಶ ಎಷ್ಟಿದ್ದಿತೋ ಅಂತಹ ಉದ್ದೇಶ ಅಲ್ಲಾಹನ ಪ್ರೀತಿ ಗಳಿಸುವ ಬಗ್ಗೆ ನಮಗೆ ಇಲ್ಲವೇ? ಲೌಕಿಕ ದೊರೆಯ ಸೇವೆಯನ್ನು ಮಾಡಿದವನ ಅಂತಿಮ ಗತಿಯಂತೂ ಅತಿ ದಾರುಣವಾಗಿತ್ತು ಎಂದು ಚರಿತ್ರೆಯಿಂದ ತಿಳಿದು ಬರುತ್ತದೆ. ಆದರೆ ಅಲ್ಲಾಹನ ಪ್ರೀತಿ ಗಳಿಸುವ ಕೆಲಸಮಾಡಿ ಇಹಲೋಕದಲ್ಲಿ ಅನುಗ್ರಹಗಳ ವಾರೀಸುದಾರರಾಗಬಹುದು. ಮತ್ತು ಅಂತಿಮ ಗತಿ ಸಹ ಅತ್ಯುತ್ತಮವಾಗಿರುವುದು.

ನಾವು ಯಾವಾಗಲೂ ನೆನಪಿಡಬೇಕಾದುದು ಏನೆಂದರೆ ಉದ್ದೇಶ ಲಕ್ಷ್ಯ ಉತ್ತಮವೂ ಉನ್ನತವೂ ಆಗಿದ್ದರೆ ಮಾತ್ರ ಸಾಕಾಗಲಾರದು. ಅದರೊಂದಿಗೆ ಆತ್ಮಾರ್ಪಣೆ ಮತ್ತು ಬಲಿದಾನ ಆವಶ್ಯಕವಾಗಿದೆ. ನಮಗೆ ಅಲ್ಲಾಹನ ಸಂಪ್ರೀತಿ ದೊರಕಬೇಕಾದರೆ ಲೌಕಿಕ ಕಾರ್ಯಗಳು ನಮ್ಮ ಧಾರ್ಮಿಕ ಕಾರ್ಯಗಳನ್ನು ಆವರಿಸಿರಬಾರದು. ನಮ್ಮ ಧಾರ್ಮಿಕ ಕಾರ್ಯಗಳು ಲೌಕಿಕ ಕಾರ್ಯಗಳನ್ನು ಆವರಿಸಿರಬೇಕು. ನಮ್ಮ ಹುಡುಗರೂ ಹುಡುಗಿಯರೂ ಇದರ ಬಗ್ಗೆ ಶ್ರದ್ಧೆ ನೀಡಬೇಕು. ಅವರ ತಂದೆ ತಾಯಂದಿರು ಸಹ ಇದರ ಬಗ್ಗೆ ಲಕ್ಷ್ಯ ನೀಡಬೇಕು. ಹೀಗೆ ಮಾಡಿದರೆ ಮನೆಗಳಲ್ಲಿ ಸಮಸ್ಯೆಗಳು ನಿವಾರಣೆಯಾಗುವುವು ಮತ್ತು ಅಲ್ಲಾಹನ ಪ್ರೀತಿಗಳಿಸಬೇಕೆಂಬ ಸತ್ಯವಿಶ್ವಾಸಿಗಳ ಉದ್ದೇಶ ಲಕ್ಷ್ಯ ಈಡೇರುವುದು. ಪೋಷಾಕಿನ ಬಗ್ಗೆ ಹೇಳುವುದಾದರೆ ಉತ್ತಮ ಬಟ್ಟೆಗಳನ್ನು ಧರಿಸುವುದು ಖಂಡಿತವಾಗಿಯೂ ನಿಷಿದ್ಧವಲ್ಲ. ಆದರೆ ಯಾವಾಗಲೂ ಫ್ಯಾಶನ್ ಬಗ್ಗೆ ಚಿಂತಿಸುತ್ತಾ ಧಾರ್ಮಿಕ ಕಾರ್ಯಗಳ ಬಗ್ಗೆ ನಿರ್ಲಕ್ಷ್ಯತೆ ಹೊಂದುವುದು ಖಂಡಿತವಾಗಿಯೂ ತಡೆಯಲ್ಪಟ್ಟಿದೆ.

ಇಸ್ಲಾಮ್ ಹೇಳುವುದೇನೆಂದರೆ ನೀವು ಧಾರ್ಮಿಕ ಕೆಲಸಗಳ ಬಗ್ಗೆ ಎಂದೂ ನಿರ್ಲಕ್ಷ್ಯತೆ ಹೊಂದಬಾರದು. ಹಾಗೆ ಮಾಡಿದರೆ ಮಾತ್ರ ನೀವು ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರಾಗುವಿರಿ. ಇದೇ ರೀತಿ ಉತ್ತಮ ಆಹಾರ ಪದಾರ್ಥಗಳನ್ನು ಇಸ್ಲಾಮ್ ತಡೆಯುವುದಿಲ್ಲ. ಆದರೆ ಧರ್ಮದ ಮಾರ್ಗದಲ್ಲಿ ಅದು ತಡೆಯಾಗಬಾರದು. ನಾವು ಯಾವಾಗಲೂ ಗಮನಿಸಬೇಕಾದುದೇನೆಂದರೆ ಧರ್ಮದ ಕಾರ್ಯಗಳಿಗೆ ಯಾವುದು ತಡೆಯಾಗುವುದೋ ಅದನ್ನು ನಾವು ದೂರ ಸರಿಸಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಎರಡು ವಿಧಗಳ ಜನರಿದ್ದಾರೆ. ಒಂದು ಗುಂಪಿನ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಲೌಕಿಕ ಕೆಲಸಗಳಲ್ಲಿ ಮಾತ್ರ ಮಗ್ನರಾಗುತ್ತಾರೆ. ಶೈತಾನನು ಅವರ ತಲೆಯ ಮೇಲೆ ಸವಾರಿ ಮಾಡುತ್ತಾನೆ. ಅವರು ಲೌಕಿಕ ಕೆಲಸಗಳಲ್ಲಿ ಪೂರ್ಣವಾಗಿ ಮಗ್ನರಾಗುತ್ತಾರೆ. ನಾನು ಹೇಳುವುದರ ಉದ್ದೇಶ ವ್ಯಾಪಾರ ನಿಷಿದ್ಧ ಎಂದಲ್ಲ. ಸಹಾಬರು ಸಹ ವ್ಯಾಪಾರ ಮಾಡುತ್ತಿದ್ದರು. ಆದರೆ ಅವರು ಧರ್ಮಕ್ಕೆ ಲೌಕಿಕ ಕೆಲಸಗಳ ಮೇಲೆ ಆದ್ಯತೆ ನೀಡುತ್ತಿದ್ದರು. ಅವರು ಇಸ್ಲಾಮಿನ ಬಗ್ಗೆ ನಿಖರ ಜ್ಞಾನ ಗಳಿಸಿದ್ದರು. ಇದೇ ಕಾರಣದಿಂದ ಅವರು ಯಾವುದೇ ಕ್ಷೇತ್ರದಲ್ಲಿ ಶೈತಾನನ ಆಕ್ರಮಣದಿಂದ ಸೋಲಲಿಲ್ಲ. ಸತ್ಯವನ್ನು ಬಹಿರಂಗಪಡಿಸುವುದರಿಂದ ಹಿಂಜರಿಯಲಿಲ್ಲ. ಯಾವುದಕ್ಕೂ ಅವರನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಆದರೆ ಲೌಕಿಕ ಕಾರ್ಯಗಳ ದಾಸರೂ ಗುಲಾಮರೂ ಆಗುವವರು ಅದನ್ನು ಆರಾಧಿಸುವವರೇ ಆಗುತ್ತಾರೆ. ಅಂತಹ ಜನರನ್ನು ಶೈತಾನನು ತನ್ನ ವಶಕ್ಕೆ ಪಡೆದುಕೊಳ್ಳುತ್ತಾನೆ. ಅವರ ಮೇಲೆ ಅವನು ಜಯಗಳಿಸುತ್ತಾನೆ. ಇನ್ನೊಂದು ಗುಂಪಿನ ಜನರು ಧರ್ಮದ ಅಭಿವೃದ್ಧಿಗೋಸ್ಕರ ಚಿಂತಿಸುವವರಾಗಿರುತ್ತಾರೆ. ಈ ಜನರ ಗುಂಪನ್ನು **ಹಿಝ್‌ಬುಲ್ಲಾಹ್** ಎಂದು ಕರೆಯುತ್ತಾರೆ. ಅವರು ಶೈತಾನ್ ಮತ್ತು ಅವನ ಸೈನ್ಯದ ವಿರುದ್ಧ ಜಯಗಳಿಸುತ್ತಾರೆ.

ಹಝ್ರತ್ ಮಸೀಹ್ ಮೌಊದ್[ಅ]ರು ಹೇಳಿದ ಹಾಗೆ ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವುದರಿಂದ ಬೈಅತ್ ಮಾಡಿದ ಉದ್ದೇಶ ಈಡೇರುತ್ತದೆ. ಅದರ ಬಗ್ಗೆ ತಿಳುವಳಿಕೆ ಪಡೆಯಲು ಲೌಕಿಕ ಕೆಲಸಗಳ ಜೊತೆಗೆ ಧಾರ್ಮಿಕ ಜ್ಞಾನಗಳಿಸಿ ಅದರ ಪ್ರಕಾರ ವರ್ತಿಸುವುದು ಆವಶ್ಯಕವಾಗಿದೆ. ಬಾಹ್ಯವಾಗಿ ಒಂದು ಉನ್ನತ

ಉದ್ದೇಶಕ್ಕೋಸ್ಕರ ಮಸ್‌ಜಿದ್‌ಗೆ ಕೆಲವರು ಹೋಗುತ್ತಾರೆ. ಆದರೆ ಅವರ ಅಂತರಂಗದಲ್ಲಿ ಲೌಕಿಕ ಮತ್ತು ಕೀಳು ಉದ್ದೇಶಗಳಿರುತ್ತವೆ. ಉನ್ನತ ಉದ್ದೇಶಗಳನ್ನು ಗಳಿಸಲು ಉನ್ನತ ಯೋಚನೆಗಳು ಸಹ ಆವಶ್ಯಕವಾಗಿವೆ. ಬಲಿದಾನಗಳನ್ನು ಸ್ವಾರ್ಥಲಾಭಕ್ಕೋಸ್ಕರವಲ್ಲ ಅಲ್ಲಾಹನ ಪ್ರೀತಿಗಳಿಸಲಿಕ್ಕೋಸ್ಕರ ಮಾಡಬೇಕಾಗಿದೆ. ಆದುದರಿಂದ ಮಸ್‌ಜಿದ್‌ಗಳಲ್ಲಿ ಜನರು ತುಂಬಿರುವುದು ಅಲ್ಲಾಹನ ಹಕ್ಕುಗಳನ್ನು ಈಡೇರಿಸಲು ಮತ್ತು ಮಾನವರ ಹಕ್ಕುಗಳನ್ನು ಈಡೇರಿಸುವ ಉದ್ದೇಶದಿಂದ ಅಲ್ಲವಾಗಿದ್ದರೆ, ಇಸ್ಲಾಮಿನ ಪ್ರಚಾರ ಮತ್ತು ಸ್ಥಾಪನೆಯ ಉದ್ದೇಶದಿಂದಲ್ಲವಾದರೆ ಅದು ನಿಷ್ಪ್ರಯೋಜಕವಾಗುತ್ತದೆ. ಇಂದು ಇಸ್ಲಾಮಿನ ಸುಂದರ ಉಪದೇಶಗಳನ್ನು ಲೋಕಕ್ಕೆ ತಲಪಿಸುವುದು ನಮ್ಮ ಜವಾಬ್ದಾರಿಯಾಗಿದೆ. ಆ ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸಲಾಗಿದೆ. ಅದನ್ನು ನಾವು ಈಡೇರಿಸಬೇಕು. ಪವಿತ್ರ ಖುರ್‌ಆನನ್ನು ವಿವಿಧ ಭಾಷೆಗಳಲ್ಲಿ ಭಾಷಾಂತರಿಸುವ ಮತ್ತು ಪ್ರಕಟಿಸುವ ಜವಾಬ್ದಾರಿ ನಮಗಿದೆ. ಅದನ್ನು ನಾವು ಈಡೇರಿಸಬೇಕು. ಜನರು ಅಲ್ಲಾಹನನ್ನು ಸರಿಯಾದ ರೀತಿಯಲ್ಲಿ ಆರಾಧಿಸುವಂತಾಗಲು ಪ್ರತಿಯೊಂದು ಸ್ಥಳದಲ್ಲಿ ಮಸ್‌ಜಿದ್‌ಗಳನ್ನು ನಾವು ನಿರ್ಮಿಸುವವರಾಗಬೇಕು. ಅದಕ್ಕೋಸ್ಕರ ನಾವು ಪ್ರತಿಯೊಂದು ದೇಶದಲ್ಲಿ ಯೋಜನೆಗಳನ್ನು ರೂಪಿಸಬೇಕು. ಮಾನವೀಯ ಮೌಲ್ಯಗಳನ್ನು ನಾವು ಉನ್ನತವಾದ ಮಾದರಿಯಿಂದ ಸ್ಥಾಪಿಸಬೇಕು. ನಾವು ಲೌಕಿಕ ಸಂಪಾದನೆಯೊಂದಿಗೆ ಈ ಎಲ್ಲಾ ಕೆಲಸಗಳನ್ನು ಮಾಡುತ್ತಾ ಇದ್ದರೆ ಲೌಕಿಕ ಸಂಪಾದನೆಗಳು ಸಹ ನಮ್ಮ ಧರ್ಮ ಕಾರ್ಯವೇ ಆಗುತ್ತದೆ. ನಾವು ಹೀಗೆ ಮಾಡದಿದ್ದರೆ ನಮಗೆ ಅನುಮತಿಸಿರುವ ಕೆಲಸಗಳು ಸಹ ಅಲ್ಲಾಹನ ದೃಷ್ಟಿಯಲ್ಲಿ ನಿಷಿದ್ಧವಾಗಿ ಮಾರ್ಪಡುತ್ತವೆ.

ಉಹುದ್ ಯುದ್ಧದಲ್ಲಿ ಒಂದು ಹಂತದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹುತಾತ್ಮರಾದರು ಎಂದು ವದಂತಿಗಳು ಹಬ್ಬಿದ್ದುವು. ಉಹುದ್ ಯುದ್ಧದ ಪ್ರಾರಂಭದಲ್ಲಿ ಮುಸ್ಲಿಮರಿಗೆ ಜಯ ಲಭಿಸಿದಾಗ ಒಬ್ಬ ಸಹಾಬಿ ಯುದ್ಧ ಕ್ಷೇತ್ರದಿಂದ ಸ್ವಲ್ಪ ದೂರ ಸರಿದಿದ್ದರು. ಅವರು ಹಲವು ದಿನಗಳಿಂದ ಹಸಿವೆಯಿಂದ ಬಳಲಿದ್ದು ಒಣ ಖರ್ಜೂರ ತಿನ್ನಲು ತೊಡಗಿದಾಗ ಮೇಲೆ ಹೇಳಿದ ವದಂತಿ ಅವರಿಗೆ ತಲಪಿತು. ಅವರು ತಕ್ಷಣ ಖರ್ಜೂರವನ್ನು ಎಸೆದು ಯುದ್ಧಕ್ಕೆ ಮರಳಿದರು ಮತ್ತು ಶಹೀದ್ ಆದರು. ಅವರಿಗೆ ಆಗ ತನ್ನ ಹಸಿವಿನ ಯೋಚನೆ ಉಂಟಾಗಲಿಲ್ಲ. ಆಗ ಆ ಖರ್ಜೂರ ಸಹ ತಿನ್ನುತ್ತಾ ಕುಳಿತಿರುವುದು ಪಾಪಕರ ಎಂದು ಅವರು ಯೋಚಿಸಿದರು. ಆದುದರಿಂದ ಧರ್ಮದ ಮಾರ್ಗದಲ್ಲಿ ತಡೆಯಾಗುವ ವಸ್ತುಗಳು ಎಷ್ಟು ಉತ್ತಮವಾಗಿದ್ದರೂ ಅದು ನಿಷಿದ್ಧವಾಗುತ್ತದೆ. ಧರ್ಮದ ಮಾರ್ಗದಲ್ಲಿ ತಡೆಯಾಗದೆ ಇರುವುದು ಎಷ್ಟು ಸುಖಕರವಾದುದಾಗಿದ್ದರೂ ಅದು ನಿಷಿದ್ಧವಲ್ಲ ಧರ್ಮಬದ್ಧವೇ ಆಗುತ್ತದೆ. ನಾವು ನಮ್ಮಲ್ಲಿ ಎಂತಹ ಸ್ಥಿತಿಯನ್ನು ಉಂಟು ಮಾಡಬೇಕೆಂದರೆ ನಮ್ಮ ಹೃದಯದ ಸ್ಥಿತಿ ಅಲ್ಲಾಹನ ಪ್ರೀತಿಯನ್ನು ಗಳಿಸುವಂತಹದು ಆಗಬೇಕು.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಒಮ್ಮೆ ಹಝ್ರತ್ ಮುಹಮ್ಮದ್(ಸ)ರು ಮಸ್‌ಜಿದ್‌ನಲ್ಲಿ ಕೆಲವು ಸಹಾಬಿಗಳೊಂದಿಗೆ ಕುಳಿತಿದ್ದಾಗ ಮೂವರು ಅಲ್ಲಿಗೆ ಬಂದರು. ಇಬ್ಬರು ಅಲ್ಲಿ ನಿಂತರು ಮೂರನೆಯವನು ದೂರ ಹೋದನು. ಒಬ್ಬನು ಹಝ್ರತ್ ಮುಹಮ್ಮದ್(ಸ)ರ ಹತ್ತಿರ ಸ್ವಲ್ಪ ಜಾಗ ಇರುವುದನ್ನು ಕಂಡು ಅಲ್ಲಿ ಕುಳಿತನು. ಇನ್ನೊಬ್ಬನು ತಾನು ನಿಂತಲ್ಲೇ ಅಂದರೆ ಹಿಂಭಾಗದಲ್ಲಿ ಕುಳಿತನು. ಮೂರನೆಯವನು ಅಲ್ಲಿ ಜಾಗವಿಲ್ಲವೆಂದು ತಿಳಿದು ಅಲ್ಲಿಂದ ಹೊರಟು ಹೋದನು. ನಂತರ ಹಝ್ರತ್ ಮುಹಮ್ಮದ್(ಸ)ರು ಅವರ ಬಗ್ಗೆ ಹೀಗೆ ಹೇಳಿದರು: ನನ್ನ ಹತ್ತಿರ ಕುಳಿತವನಿಗೆ ಅಲ್ಲಾಹನು ಆಶ್ರಯ ನೀಡಿದನು. ಎರಡನೆಯವನ, ದೂರ ಜನರ ಹಿಂದೆ ಕುಳಿತವನ ಪಾಪಗಳನ್ನು ಅಲ್ಲಾಹನು ಕ್ಷಮಿಸಿದನು. ಆದರೆ ಮೂರನೆಯವನು ಮುಖ ತಿರುಗಿಸಿ ಹೋದ ಕಾರಣ ಅಲ್ಲಾಹನೂ ಅವನಿಂದ ಮುಖ ತಿರುಗಿಸಿದನು.

ಅಲ್ಲಾಹನ ದೃಷ್ಟಿ ಮನುಷ್ಯರ ಹೃದಯದ ಮೇಲಿರುತ್ತದೆ. ಅಲ್ಲಾಹನ ಅನುಗ್ರಹಗಳು ಸಹ ಹೃದಯದ ಸ್ಥಿತಿಯ ಪ್ರಕಾರವಾಗಿರುತ್ತದೆ. ಆದುದರಿಂದ ಹೃದಯದ ಸ್ಥಿತಿ ಪ್ರತಿಫಲದ ದೃಷ್ಟಿಯಲ್ಲಿ ಬಹಳ ಮುಖ್ಯವಾಗಿದೆ. ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಮೇಲಿನ ಉದಾಹರಣೆಯಲ್ಲಿ ಅಲ್ಲಾಹನು ಹೃದಯದ ಸ್ಥಿತಿಯನ್ನು ನೋಡಿ ಪ್ರತಿಫಲ ನೀಡಿದನು. ಇಬ್ಬರಿಗೆ ಅವರ ಸ್ಥಿತಿಗೆ ಅನುಸಾರವಾಗಿ ಅನುಗ್ರಹ ಲಭಿಸಿತು. ಮೂರನೆಯವನಿಗೆ ಏನೂ ಸಿಗಲಿಲ್ಲ. ಅವನು ಅಲ್ಲಾಹನ ಕೋಪಕ್ಕೆ ಪಾತ್ರನಾದನು.

ಸತ್ಯವಿಶ್ವಾಸಿ ನೋಡಬೇಕಾದುದು ಏನೆಂದರೆ ಅವನ ಮುಂದಿರುವ ಉದ್ದೇಶ ಲಕ್ಷ್ಯಕ್ಕೋಸ್ಕರ ಅವನು ಎಷ್ಟು ತ್ಯಾಗ ಮಾಡಿದ್ದಾನೆಂದು. ಅವನು ಆವಶ್ಯಕವಾದ ತ್ಯಾಗ ಮಾಡಿದ್ದರೆ ಅವನು ಅನುಗ್ರಹಕ್ಕೆ ಅರ್ಹನಾಗುತ್ತಾನೆ. ಬಲಿದಾನ ಯಾವಾಗಲೂ ಸಾಮರ್ಥ್ಯಕ್ಕೆ ಅನುಸಾರವಾಗಿರುತ್ತದೆ ಅಥವಾ ಆವಶ್ಯಕತೆಗೆ ಅನುಸಾರವಾಗಿರುತ್ತದೆ. ತನ್ನ ಸಾಮರ್ಥ್ಯದ ಪೂರ್ಣ ಪ್ರಮಾಣಕ್ಕನುಸಾರವಾಗಿ ಬಲಿದಾನ ನೀಡುವ ಆವಶ್ಯಕತೆ ಎಲ್ಲ ಸಮಯದಲ್ಲೂ ಬರುವುದಿಲ್ಲ. ಕೆಲವು ಸಾರಿ ಆವಶ್ಯವಿರುವಷ್ಟು ಬಲಿದಾನ ಮಾಡಲು ಮಾತ್ರ ಶರೀಅತ್ ಆಜ್ಞಾಪಿಸುತ್ತದೆ.

ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ. ಹಝ್ರತ್ ಮುಹಮ್ಮದ್(ಸ)ರು ಹೇಳಿದರು: ಒಂದು ದಿರ್‌ಹಮ್ ಒಂದು ಲಕ್ಷ ದಿರ್‌ಹಮ್‌ಗಿಂತ ಮೇಲಿನ ಸ್ಥಾನ ಪಡೆಯಿತು. ಒಬ್ಬ ವ್ಯಕ್ತಿಯ ಬಳಿ ಎರಡು ದಿರ್‌ಹಮ್ ಇತ್ತು. ಅವನು ಅದರಿಂದ ಒಂದು ದಿರ್‌ಹಮ್ ಧರ್ಮಕ್ಕೋಸ್ಕರ ಕೊಟ್ಟನು. ಒನ್ನೊಬ್ಬನ ಬಳಿ ಹಲವು ಲಕ್ಷ ದಿರ್‌ಹಮ್‌ಗಳಿದ್ದುವು. ಅವನು ಒಂದು ಲಕ್ಷ ದಿರ್‌ಹಮ್ ಮಾತ್ರ ಕೊಟ್ಟನು. ಅದು ಅವನ ಸ್ಥಿತಿಯ ಪ್ರಕಾರ ಕಡಿಮೆ ಆಗಿತ್ತು. ಆದುದರಿಂದ ನೆನಪಿಡಬೇಕಾದುದೇನೆಂದರೆ ಮುಖ್ಯ ಉದ್ದೇಶ ಅಲ್ಲಾಹನ

ಪ್ರೀತಿ ಗಳಿಸುವುದಾಗಿರಬೇಕು. ಮೇಲೆ ವಿವರಿಸಿದ ಇಬ್ಬರು ಅಲ್ಲಾಹನ ಪ್ರೀತಿ ಸಂಪಾದಿಸಲಿಕ್ಕೋಸ್ಕರವೇ ಹಣ ನೀಡಿದ್ದರು.

ಸತ್ಯವಿಶ್ವಾಸಿಯ ಮುಖ್ಯ ಕೆಲಸವೇನೆಂದರೆ ಅಲ್ಲಾಹನ ಪ್ರೀತಿಗಳಿಸಲು ತನ್ನ ಹೃದಯವನ್ನು ಪರಿವರ್ತಿಸಬೇಕು. ಅಲ್ಲಾಹನ ಪ್ರೀತಿ ಸಂಪಾದನೆ ಅವನ ಉದ್ದೇಶವಾಗಿರಬೇಕು. ಅದರಲ್ಲಿಯೇ ಅವನ ಜಯವಿದೆ. ಆದುದರಿಂದ ನಾವು ಲಕ್ಷ್ಯವಿಟ್ಟು ಯೋಚಿಸಬೇಕು. ನಮ್ಮ ಪ್ರತಿಜ್ಞೆ ಈಡೇರಿಸಲು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಹೇಗೆ ವಿನಿಯೋಗಿಸಬಹುದೆಂದು. ಅನ್‌ಸಾರುಲ್ಲಾ ಇಜ್ತಿಮಾ ಮತ್ತು ಶೂರಾ ಇಂದಿನಿಂದ ಪ್ರಾರಂಭವಾಗುತ್ತದೆ. ನಾವು ನಮ್ಮ ಪ್ರತಿಜ್ಞೆ ಉನ್ನತ ರೀತಿಯಲ್ಲಿ ಹೇಗೆ ಈಡೇರಿಸಬಹುದೆಂದು ಅವರು ಶೂರಾದಲ್ಲಿ ಚರ್ಚಿಸಬೇಕು. ಮತ್ತು ಸ್ವತಃ ಯೋಚಿಸಬೇಕು. ಅನ್‌ಸಾರುಲ್ಲಾ ತಮ್ಮನ್ನು ಮಾದರಿಯಾಗಿ ಮಾಡಬೇಕಾದ ಪ್ರಾಯದಲ್ಲಿದ್ದಾರೆ. ಅಲ್ಲಾಹನಿಗೆ ನಮ್ಮದು ಯಾವುದೂ ಆವಶ್ಯವಿಲ್ಲ. ನೀವು ಧರ್ಮಕ್ಕೆ ಆದ್ಯತೆ ನೀಡಿದರೆ ನೀವು ನನ್ನ ಪ್ರೀತಿ ಗಳಿಸುವಿರಿ ಎಂದು ಹೇಳಿದುದು ಅಲ್ಲಾಹನ ವರದಾನವಾಗಿದೆ. ಅಲ್ಲಾಹನಿಗೆ ನಮ್ಮ ಅಥವಾ ಬೇರೆ ಯಾರ ಆಶ್ರಯವೂ ಬೇಕಾಗಿಲ್ಲ. ಎಲ್ಲಾ ಸಂಪತ್ತನ್ನು ಅವನೇ ಸೃಷ್ಟಿಸಿದ್ದಾನೆ. ಧರ್ಮದ ಕೆಲಸ ಮಾಡುವವರಿಗೆ ಅವನೇ ಇವುಗಳನ್ನೆಲ್ಲಾ ಹಂಚಿಕೊಡಬಹುದಾಗಿತ್ತು. ಆದರೆ ಅವನು ನಮ್ಮ ಉದ್ದೇಶಲಕ್ಷ್ಯಗಳನ್ನು ತಿಳಿಸಿ ಅವುಗಳನ್ನು ಗಳಿಸಲು ತ್ಯಾಗ ಮಾಡಲು ಆಜ್ಞಾಪಿಸಿದನು. ಅದರ ಉದ್ದೇಶ ನಾವು ಅವನ ಸಂಪ್ರೀತಿ ಗಳಿಸುವವರಾಗಬೇಕೆಂದಾಗಿದೆ.

ಸಂಪತ್ತನ್ನು ಮಾತ್ರವಲ್ಲ ಸಂತಾನಗಳನ್ನು ಸಹ ಅಲ್ಲಾಹನು ನಮಗೆ ನೀಡಿದನು. ಅವರನ್ನು ತರಬೇತಿ ಮಾಡುವ ಕೆಲಸ ತಂದೆ ತಾಯಂದಿರಿಗೆ ವಹಿಸಿಕೊಟ್ಟನು. ಇದು ಬಹಳ ದೊಡ್ಡ ಜವಾಬ್ದಾರಿ ಆಗಿದೆ. ಅಹ್ಮದಿ ತಂದೆ ತಾಯಂದಿರು ಮಕ್ಕಳಿಗೆ ಹೇಗೆ ತರಬೇತಿ ನೀಡಬೇಕೆಂದರೆ ಅವರು ಧರ್ಮಕ್ಕೋಸ್ಕರ ಕೆಲಸ ಮಾಡುವವರಾಗಬೇಕು ಆಗ ತಂದೆ ತಾಯಂದಿರು ಮಾಡಿದ ಪ್ರತಿಜ್ಞೆ ಈಡೇರುತ್ತದೆ. ಮಕ್ಕಳಿಗೆ ಬಾಲ್ಯದಿಂದಲೇ ಧರ್ಮಕ್ಕೆ ಆದ್ಯತೆ ನೀಡುವ ಮನೋಭಾವ ಉಂಟಾಗುವಂತೆ ತರಬೇತಿ ನೀಡಬೇಕು. ಅಲ್ಲಾಹನು ಈ ಕೆಲಸಗಳನ್ನು ನಮಗೆ ವಹಿಸಿಕೊಟ್ಟು ನಮ್ಮನ್ನು ಪರೀಕ್ಷಿಸುತ್ತಾನೆ ಮಾತ್ರವಲ್ಲ ಆ ಮೂಲಕ ಅವನು ನಮಗೆ ಅನುಗ್ರಹಗಳನ್ನು ನೀಡ ಬಯಸುತ್ತಾನೆ.

ಎಲ್ಲಾ ಹುದ್ದೇದಾರರಿಗೆ ನಾನು ಹೇಳಲು ಬಯಸುವುದೇನೆಂದರೆ ಧರ್ಮ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಜವಾಬ್ದಾರಿ ಅವರಿಗೆ ಅನ್ಯರಿಗಿಂತ ಹೆಚ್ಚಿಗಿದೆ ಎಂದು ಅವರು ತಿಳಿದುಕೊಳ್ಳಬೇಕು. ಒಂದು ಉದ್ದೇಶ ಲಕ್ಷ್ಯವನ್ನು ಗಳಿಸಲು ಅವರ ಮೇಲೆ ಹೊಣೆಗಾರಿಕೆ ಹೊರಿಸಲಾಗಿದೆ. ಅವರು ತಮ್ಮ ತ್ಯಾಗದ ಮಟ್ಟವನ್ನು ಉನ್ನತಗೊಳಿಸಬೇಕು. ಕೆಳಮಟ್ಟದಿಂದ ಪ್ರಾರಂಭಿಸಿ ಕೇಂದ್ರ ಮಟ್ಟದ ತನಕ ಪ್ರತಿಯೊಬ್ಬ ಹುದ್ದೇದಾರ ತನ್ನ ಕಾರ್ಯಭಾರದ ಪ್ರಕಾರ ತನ್ನ ಪ್ರತಿಜ್ಞೆಯನ್ನು ಈಡೇರಿಸಲು ಸಾಧ್ಯವಿರುವಷ್ಟು ಮಟ್ಟಿಗೆ ಪರಿಶ್ರಮಿಸಬೇಕಾಗಿದೆ. ಅಲ್ಲಾಹನ ದೃಷ್ಟಿ ಹೃದಯಗಳ ಮೇಲಿದೆ. ಉತ್ಸಾಹದಿಂದ ಕಾರ್ಯ ನಿರತನಾಗುವವನ ನಿಷ್ಠೆಗೆ ಅಲ್ಲಾಹನು ಅನುಗ್ರಹ ನೀಡುತ್ತಾನೆ. ಅವನಿಗೆ ತನ್ನ ಸಾಮೀಪ್ಯ ನೀಡುತ್ತಾನೆ. ಅದಕ್ಕೋಸ್ಕರ ಪ್ರತಿಯೊಬ್ಬ ಹುದ್ದೇದಾರ ಸಂಪೂರ್ಣ ಸಾಮರ್ಥ್ಯದೊಂದಿಗೆ ಪ್ರಯತ್ನಿಸಬೇಕು. ಅಲ್ಲಾಹನು ಎಲ್ಲ ಹುದ್ದೇದಾರರಿಗೂ ಎಲ್ಲ ಅಹ್ಮದಿಯರಿಗೂ ನನಗೂ ಸಹ ಧರ್ಮ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ನಮ್ಮ ಪ್ರತಿಜ್ಞೆಯನ್ನು ಸರಿಯಾದ ರೀತಿಯಲ್ಲಿ ಪಾಲಿಸಲು ಸಹಾಯ ನೀಡಿ ಅನುಗ್ರಹಿಸಲಿ– ಆಮೀನ್.

ಇಂದು ಸಹ ಒಂದು ದುಃಖದ ವಾರ್ತೆ ಇದೆ. ಪಾಕಿಸ್ತಾನದಲ್ಲಿ ಒಂದು ಶಹಾದತ್ ಸಂಭವಿಸಿದೆ. ಮುಕರ್‌ರಮ್ ಲತೀಫ್ ಆಲಮ್ ಬಟ್ ಸಾಹೇಬ್ ಅವರನ್ನು ಅಕ್ಟೋಬರ್ 15ರಂದು ಕಾಮ್ರ ಎಂಬಲ್ಲಿ ಇಬ್ಬರು ಅಜ್ಞಾತ ಮೋಟರ್ ಸೈಕಲ್ ಸವಾರರು ಗುಂಡು ಹಾರಿಸಿ ಶಹೀದರನ್ನಾಗಿ ಮಾಡಿದರು. إِنَّا لِلّٰهِ وَإِنَّا إِلَيْهِ رَاجِعُونَ ಅವರು 1952ರಲ್ಲಿ ಗುಜರಾನ್‌ವಾಲಾದಲ್ಲಿ ಜನಿಸಿದರು. ಅವರು ಏಯರ್‌ಫೋರ್ಸ್‌ನಲ್ಲಿ ಕೆಲಸಮಾಡಿ 1991ರಲ್ಲಿ ನಿವೃತ್ತರಾಗಿದ್ದರು. ಅಲ್ಲಾಹನು ಶಹೀದ್ ಮರ್‌ಹೂಮರ ಪದವಿಯನ್ನು ಉನ್ನತಗೊಳಿಸಲಿ. ಅವರ ಬಂಧು ಮಿತ್ರಾದಿಗಳಿಗೆ ಸಹನೆಯನ್ನು ದಯಪಾಲಿಸಲಿ.

ಪಾಕಿಸ್ತಾನದ ಅಹ್ಮದಿಯರಿಗೆ ಅಲ್ಲಾಹನು ಸಂರಕ್ಷಣೆ ನೀಡುವವನಾಗಲಿ ಎಂದು ಪ್ರಾರ್ಥಿಸುವ. ಶತ್ರುಗಳ ಶತ್ರುತ್ವ ವರ್ಧಿಸುತ್ತಾ ಇದೆ. ಅಲ್ಲಾಹನು ನಮಗೆ ಶಾಂತಿ ಮತ್ತು ಸಮಾಧಾನದ ಸ್ಥಿತಿಯನ್ನು ದಯಪಾಲಿಸಲಿ– ಆಮೀನ್.

---------------*****---------------

*Friday Sermon delivered by Hadrath Khaleefatul Masih Al Khamis*(atba)

*at Masjid Baithul Futhuh, London on 17-10-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

**Email**: *khutuba.kannada@gmail.com*